ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 483/2021 .

ಪ್ರಾ.ಸಾ. : 8
ಚಾ.ಸಾ. : 13

| | | |
|---|---|---|
| ಹೆಸರು | : | ಬೋಪಣ್ಣ ಕೆ . ಬಿ |
| ತಂದೆಯ ಹೆಸರು | : | ಲೇಟ್ ಬೆಳ್ಳಿಯಪ್ಪ ಕೆ. ಎಂ. |
| ವಯಸ್ಸು | : | 45 ವರ್ಷ |
| ಉದ್ಯೋಗ | : | ವ್ಯವಸಾಯ |
| ವಿಳಾಸ | : | ಬಿರುನಾಣಿ |

... ........................................................................................................ ...

ದಿನಾಂಕ 19 ನೇ ಜುಲೈ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ :-

ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ, ಸಾಕ್ಷಿಯು ಗುರುತಿಸಿರುವ ದಾಖಲೆಯು ಸ್ವತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿ ಪಿ 16 ಎಂದು, ಸಾಕ್ಷಿಯ ಸಹಿ ನಿ ಪಿ 16 ಎ ಎಂದು ಗುರುತಿಸಲಾಯಿತು. ಬಿರುನಾಣಿ ಟೌನ್ ನಲ್ಲಿ ಪೊಲೀಸರು ನನ್ನ ಸಹಿ ಪಡೆದರು. ಅದರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ, ಏನನ್ನೂ ಅಮಾನತ್ತುಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲು: - ಮಾನ್ಯ ಸ ಸ ಅ ರವರಿಂದ : -

ದಿ.15.11.2019 ರಂದು ನಾನು ಮತ್ತು ಚಾಸಾ 12 ಶ್ರೀಮಂಗಲ ಟೌನ್ ನಲ್ಲಿ ಇದ್ದಾಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಂದರೆ ಆರೋಪಿತರು ಕಡವೆಯನ್ನು ಕೊಂದು ಸಾಗಾಣೆ ಮಾಡುತ್ತಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಜರ್ ಗೆ ಸಹಕರಿಸಲು ಕೋರಿದರು ಎಂದರೆ ಸರಿಯಲ್ಲ. ಆನಂತರ ಆರೋಪಿ 1 ರವರು

ಪ್ರಕರಣಕ್ಕೆ ಸಂಬಂಧಿಸಿದಂತೆ ಕೋವಿಯ ದಾಖಲಾತಿಗಳನ್ನು ಹಾಜರುಪಡಿಸಲು ಹಾಜರಾಗಿದ್ದ ನನ್ನ ಸಮಕ್ಷಮ ಕೋವಿಯ ದಾಖಲಾತಿಗಳನ್ನು ಹಾಜರುಪಡಿಸಿದರು ಎಂದರೆ ಸರಿಯಲ್ಲ. ಆಗ ಪೊಲೀಸರು ಮಹಜರ್ ಮಾಡಿ ಕೋವಿಯ Exemption certificate ಅನ್ನು ನನ್ನ ಸಮಕ್ಷಮ ಅಮಾನತುಪಡಿಸಿರು ಎಂದರೆ ಸರಿಯಲ್ಲ. ಆನ ನಾನು ನಿಪಿ 16 ಕ್ಕೆ ಕುಟ್ಟ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಈ ಬಗ್ಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಪಕ್ಕದ ಊರಿನವರು. ಈಗ ಎಲ್ಲ ವಿಚಾರ ಗೊತ್ತಿದ್ದರೂ ಆರೋಪಿ ನನಗೆ ಪರಿಚಯದವರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿರಾಕರಿಸಿದ ಹೇಳಿಕೆಯನ್ನು ನಿ ಪಿ 17 ಎಂದು ಗುರುತಿಸಲಾಯಿತು.

ಪಾಟೀ ಸವಾಲು :- ಆರೋಪಿತರ ಪರ ವಕೀಲರವರಿಂದ :-

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)